ಅಕಟ - ವಿಕಟ



ಕನಸು ದೊಡ್ಡದಾದರೆ, ಅಂತರಿಕ್ಷವೂ ಕೈಗೆಟುಕದೇ ಇರದು!

ವಿರಾಜಯಾನ

ವಿರಾಜ್ ಕೆ ಅಣಜಿ

virajkvishwavani@gmail.com

ಮಂಗನಿಂದ ಮಾನವನ ವಿಕಾಸ ಆದ ನಂತರ, ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದನ್ನು ಕಲಿತ. ಮೀನಿನಷ್ಟೇ ಸರಾಗವಾಗಿ ಈಜುವುದನ್ನು ಕಲಿತ. ಗುಡ್ಡ, ತೊರೆಗಳನ್ನು ದಾಟಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವುದನ್ನು ಕಲಿತ. ಇದರಿಂದಾಗಿ ಭೂ ಮಂಡಲದ ಮೂಲೆಮೂಲೆಯನ್ನೂ ಹುಡುಕಲು ಆರಂಭಿಸಿದ. ಈ ಯಾನವೆಲ್ಲವೂ ಮೊದಲು ಅನ್ವೇಷಕರಿಂದ ಆರಂಭವಾಯಿತು. ನಂತರ ವಾಸ್ಕೋ ಡಿಗಾಮ, ಅಮೆರಿಗೋ ವೆಸ್ಪುಸಿಯಂಥ ನಾವಿಕರು ಹೊಸ ಜಗತ್ತನ್ನು ಹುಡುಕಿ ಹೊರಟರು. ನಂತರ ವ್ಯಾಪಾರಿಗಳು ತಮ್ಮ ಸರಂಜಾಮು ಹೇರಿಕೊಂಡು ಸಮುದ್ರಗಳನ್ನು ದಾಟಿ ಹೊರಟರು. ಜಗತ್ತನ್ನು ಗೆಲ್ಲಬೇಕು ಎಂದು ಚಕ್ರವರ್ತಿಗಳು ಎನಿಸಿಕೊಂಡ ಹಲವರು ಭೂಮಂಡಲದ ಪ್ರದಕ್ಷಿಣೆ ಆರಂಭಿಸಿದರು. ಜಲಮಾರ್ಗಗಳ ನಂತರ ತಂತ್ರಜ್ಞಾನದ ಬಲದಿಂದ ವಾಯುಯಾನ ಆರಂಭವಾಯಿತು. ತಂತ್ರಜ್ಞಾನ, ವಿಜ್ಞಾನದ ಬಹುದೊಡ್ಡ ಕ್ರಾಂತಿಯಿಂದಾಗ ಅಂತರಿಕ್ಷಕ್ಕೂ ಲಗ್ಗೆ ಇಡುವ ಪ್ರಯತ್ನ ಪ್ರಾರಂಭವಾದವು, ಅದರಲ್ಲಿಯೂ ನಾವು ಸೈ ಎನಿಸಿಕೊಂಡೆವು. ಭೂಮಿಯನ್ನು ಬಿಟ್ಟು ಆಚೆ ಏನಿದೆ, ಜಗತ್ತಿನ ಸೃಷ್ಟಿಯ ಗುಟ್ಟುಗಳೇನು ಎಂದು ಅರಿಯಲು ಇಸ್ರೊ, ನಾಸಾದಂತಹ ಸಂಸ್ಥೆಗಳು ಮುಂದಾದವು. ದೇಶದ ಗಡಿ ರಕ್ಷಣೆ, ಟೆಲಿ ಕಮ್ಯೂನಿಕೇಷನ್ ವಿಚಾರದಲ್ಲಿ ಒಂದರ ಹಿಂದೊಂದು ಸ್ಯಾಟಲೈಟ್‌ಗಳನ್ನು ಅಂತರಿಕ್ಷದಲ್ಲಿ ಕೂರಿಸಿ ಬರಲಾಯಿತು. ಇದೆಲ್ಲದರ ಫಲವಾಗಿಯೇ ಇಡೀ ಜಗತ್ತು ನಮ್ಮ ಪಕ್ಕದ ಮನೆಯಷ್ಟೇ ಹತ್ತಿರದಲ್ಲಿದೆ ಎನ್ನುವಷ್ಟು ಆಪ್ತವಾಯಿತು. ಜಗತ್ತಿನ ಯಾವ ಮೂಲೆಯನ್ನು ಬೇಕಾದರೂ ಕುಳಿತಲ್ಲಿಯೇ ನೋಡುವ, ಅಲ್ಲಿದ್ದವರೊಂದಿಗೆ ಮಾತನಾಡುವ ಅವಕಾಶ ಪ್ರಾಪ್ತವಾಯಿತು.

ಇಷ್ಟೆಲ್ಲ ಆದರೂ, ಮಾನವನ ಅಂತರಂಗದಲ್ಲಿ ಅಂತರಿಕ್ಷ ಒಂದು ಕೌತುಕವನ್ನು ಹುಟ್ಟು ಹಾಕುತ್ತಲೇ ಇತ್ತು. ಬಾಹಾಕಾಶ್ಯ ಹೇಗಿದೆ ಎಂಬುದನ್ನು ಫೀಲ್ ಮಾಡಬೇಕು ಎಂಬುದು ಹಲವರ ಕನಸಾಗಿತ್ತು. ಸದ್ಯ ನಾವಿರುವೆಡೆ ಮೂವತ್ತು- ನಲವತ್ತು ಅಳತೆಯ ಒಂದು ಸೈಟ್ ತೆಗೆದುಕೊಳ್ಳುವುದೂ ದುಸ್ತರ ಎನಿಸುವಂಥ ಕಾಲದಲ್ಲಿ ಅಂತರಿಕ್ಷವನ್ನು ನೋಡಿ ಬರಬೇಕು ಎಂಬ ಕನಸು ಕಾಣಲೂ ಕೂಡ ಗುಂಡಿಗೆ ಬೇಕಿತ್ತು.

ಆದರೆ, ಅದನ್ನೆಲ್ಲ ಮೀರಿ ತಾನು ಅಂತರಿಕ್ಷಕ್ಕೆ ಟೂರ್ ಹೋಗಬೇಕು ಎಂದುಕೊಂಡಿದ್ದೇನೆ. ಇದು ನನ್ನ ಜೀವಮಾನದ ಪರಮ ಗುರಿ ಎಂದು 2004ರಲ್ಲಿ ವರ್ಜಿನ್ ಸಂಸ್ಥೆಯ ಮಾಲೀಕ ರಿಚರ್ಡ್ ಬ್ರಾನ್ಸನ್ ಘೋಷಿಸಿದ್ದರು. ಆಗ ಅದು ನಿಜಕ್ಕೂ ಸಾಧ್ಯವೇ ಅನಿಸಿದ್ದುಂಟು. ಆದರೆ, ಬ್ರಾನ್ಸನ್ ಅವರೇನು ಸುಮ್ಮನೇ ಈ ಮಾತನ್ನು ಹೇಳಿರಲಿಲ್ಲ. ಅವರಿಗೆ ದೊಡ್ಡ ಕನಸು ಕಾಣುವುದು ಹೇಗೆ ಎಂಬುದು ಗೊತ್ತಿತ್ತು. ಅದಕ್ಕಿಂತ ಮಿಗಿಲಾಗಿ, ಕಂಡ ಕನಸನ್ನು ನನಸಾಗಿಸಿಕೊಳ್ಳಲು ಎಂಥ ರಿಸ್ಕ್ ಬೇಕಾದರೂ ತೆಗೆದುಕೊಂಡು, ಅಂದುಕೊಂಡಿದ್ದನ್ನು ಪೂರೈಸಿಕೊಳ್ಳಬಲ್ಲೆ ಎಂಬ ಸಿಂಹದಂಥ ಆತ್ಮಬಲವಿತ್ತು. ಅದಕ್ಕಾಗಿಯೇ ತಾನು ಸ್ಪೇಸ್ ಟೂರ್ ಮಾಡಬೇಕು ಎಂದು ಘೋಷಣೆ ಮಾಡುವ ಮೊದಲಿನಿಂದಲೇ ಬ್ರಾನ್ಸನ್, ಈ ಬಗ್ಗೆ ಸತತ ಪ್ರಯೋಗ, ಪ್ರಯತ್ನ ಆರಂಭಿಸಿದ್ದರು. ಆದರೆ, ಬಾಹ್ಯಾಕಾಶ ಕ್ಷೇತ್ರದಲ್ಲಿ ಸದ್ಯದಲ್ಲಿ ಆಗುತ್ತಿರುವ ಬೆಳವಣಿಗೆ, ನಾಸಾ ಅಥವಾ ಯೂರೋಪ್ ಒಕ್ಕೂಟದ ಬಾಹ್ಯಾಕಾಶ ಸಂಸ್ಥೆಗಳಿಂದ ತನ್ನ ಆಸೆ ಈಡೇರಿಕೆ ಕಷ್ಟಸಾಧ್ಯ ಎಂಬುದನ್ನು ಬ್ರಾನ್ಸನ್ ಅಂದೇ ಅರಿತಿದ್ದರು. ಆದರೂ ತನ್ನ ಬಾಲ್ಯದ ಆಸೆಯನ್ನು ಸುಲಭವಾಗಿ ಕೈ ಚೆಲ್ಲಲು ಬ್ರಾನ್ಸನ್ ಅವರಿಗೆ ಇಷ್ಟವಿರಲಿಲ್ಲ. ಅದಕ್ಕಾಗಿ ವರ್ಜಿನ್ ಗ್ಯಾಲಕ್ಟಿಕ್ ಎಂಬ ಹೆಸರಿನಲ್ಲಿ ಸ್ವಂತದ್ದೊಂದು ಸ್ಪೇಸ್-ಪ್ಲೇನ್ ತಯಾರಿಕಾ ಕಂಪನಿಯನ್ನೇ ಆರಂಭಿಸಿಬಿಟ್ಟರು. ತನ್ನ ಕನಸು-ನನಸು ಮಾಡಿಕೊಳ್ಳಲು ಯಾರೂ ಊಹಿಸಲಾಗದ ಕಠಿಣ ರಿಸ್ಕ್ ಮತ್ತು ದೊಡ್ಡ ಪ್ರಯತ್ನಕ್ಕೆ ಬ್ರಾನ್ಸನ್ ಕೈ ಹಾಕಿದ್ದರು!

ಈ ಮೂಲಕ ಬಾಹ್ಯಾಕಾಶ ಪ್ರವಾಸೋದ್ಯಮದ ಯುಗದಲ್ಲಿ ಪ್ರಾರಂಭವಾದ ಖಾಸಗಿ ಒಡೆತನದ ವಿಶ್ವದ ಮೊದಲ ಕಂಪನಿ ಎಂಬ ಹೆಗ್ಗಳಿಕೆಗೆ ವರ್ಜಿನ್ ಪಾತ್ರವಾಯಿತು. ತನ್ನದೊಂದು ಕನಸು ನನಸು ಮಾಡಿಕೊಳ್ಳಲು ಕೋಟಿ ಕೋಟಿ ಹಣವನ್ನು ಬ್ರಾನ್ಸನ್ ವ್ಯಯಿಸಿದರು. ಅದರಲ್ಲಿ ಅಪಾರ ಪರಿಶ್ರಮ, ಪ್ರಯತ್ನ, ಸಮಯ ಎಲ್ಲವೂ ಒಳಗೊಂಡಿತ್ತು. ಆದರೆ, ಎಲ್ಲ ಸಾಧನೆಗಳ ಮುನ್ನ ಸಹಜವೆಂಬಂತೆ, ವರ್ಜಿನ್ ಕೂಡ ದೊಡ್ಡ ಪೆಟ್ಟು, ಸೋಲುಗಳನ್ನು ಕಾಣಬೇಕಾಯಿತು.

2007ರಲ್ಲಿ ಕ್ಯಾಲಿಫೋರ್ನಿಯಾದ ಮೊಜಾವೆ ಮರುಭೂಮಿಯಲ್ಲಿ ರಾಕೆಟ್ ಮೋಟಾರ್ ಪರೀಕ್ಷೆ ಮಾಡುವಾಗ ಪ್ರಯೋಗ ವಿಫಲವಾಗಿ ಮೂವರು ಅಪ್ರತಿಮ ತಾಂತ್ರಿಕ ತಜ್ಞರು ಮೃತಪಟ್ಟರು. ಆಗ, ತಮ್ಮ ಯೋಜನೆಯಲ್ಲಿ ದೊಡ್ಡ ಹಿನ್ನಡೆಯಾದರೂ ಬ್ರಾನ್ಸನ್ ಕೈ ಚೆಲ್ಲದೆ ಮತ್ತದೆ ಜೋಶ್‌ನಲ್ಲಿ ಮುನ್ನಡೆದರು. ಆದರೆ ಮತ್ತೆ 2014ರಲ್ಲಿ ಸ್ಟಾರ್ ಟ್ರೆಕ್ ಹಡಗಿನ ಹೆಸರಿನ ಮತ್ತೊಂದು ಪ್ರಯೋಗಾರ್ಥ ಸ್ಪೇಸ್ ಶಿಪ್ ಕೂಡ ವಿಫಲವಾಗಿ ಪೈಲಟ್ ಮೃತಪಟ್ಟರು. ತನ್ನದೊಂದು ಕನಸಿನ ಪೂರೈಕೆಗಾಗಿ ಇಷ್ಟೆಲ್ಲ ಶ್ರಮ, ಹಣ ಪೋಲಾಗುತ್ತಿದ್ದರೂ ಕೂಡ ಬ್ರಾನ್ಸನ್ ಅವರಿಗೆ ಈ ಬಗ್ಗೆ ಚಿಂತೆಯಿರಲಿಲ್ಲ, ಅದೇನೇ ಕಷ್ಟವಾಗಲಿ, ನಷ್ಟವೂ ಆಗಲಿ ಅಂದುಕೊಂಡದ್ದು ಆಗಲೇಬೇಕು. ಅಂತರಿಕ್ಷಕ್ಕೆ ಟೂರಿಸ್ಟ್ ರೀತಿ ಹೋಗಿ ಭೂಮಿಯನ್ನು ಮೇಲಿನಿಂದ ಕಣ್ತುಂಬಿಕೊಳ್ಳಲೇ ಬೇಕು ಎಂದು ತಪಸ್ಸಿನ ರೀತಿ ಹಠ ಹಿಡಿದು ಬ್ರಾನ್ಸನ್ ಕುಳಿತಿದ್ದರು.

ಸತತ ಸೋಲು, ಹಿನ್ನಡೆಯ ನಡುವೆ 2018-19ರಲ್ಲಿ ವರ್ಜಿನ್ ಗ್ಯಾಲಕ್ಟಿಕ್‌ನ ಒಂದು ಪ್ರಯೋಗಾರ್ಥ ಸ್ಪೇಸ್ ಶಿಪ್, ಭೂಮಿಯ ಗುರುತ್ವಾಕರ್ಷಣ ರೇಖೆಯ ಕಾಲ್ಪನಿಕ ಗಡಿಯನ್ನು ಮುಟ್ಟಿ ಬಂದಿತು. ಇದೊಂದು ಯಶಸ್ವಿ ಪ್ರಯೋಗದಿಂದ ತನ್ನ ಕನಸು ಈಡೇರಿಸಿಕೊಳ್ಳುವ ಸಮಯ ಹತ್ತಿರ ಬಂದ ಖುಷಿ ಬ್ರಾನ್ಸನ್ ಪಾಲಿಗೆ ಒದಗಿ ಬಂತು.

ಅದೆಲ್ಲದರ ಫಲವಾಗಿ, 2021ರ ಇದೇ ಜುಲೈ 11ರಂದು ವರ್ಜಿನ್ ಗಲಾಕ್ಟಿಕ್ ಎಂಬ ತಮ್ಮದೇ ಕಂಪನಿ ನಿರ್ಮಿಸಿದ ಖಾಸಗಿ ಸ್ಪೇಸ್ ಪ್ಲೇನ್‌ನಲ್ಲಿ ಅಂತರಿಕ್ಷಕ್ಕೆ ಯಾತ್ರೆ ಮಾಡಿ ಬಂದಿದ್ದಾರೆ. ಅಂದರೆ, ಸತತ 17 ವರ್ಷಗಳ ಕಾಲ, ತಾನು ಆಡಿದ ಮಾತನ್ನು, ಬಾಲ್ಯದಲ್ಲಿ ಕಂಡಿದ್ದ ಕನಸನ್ನು 71ರ ಹರೆಯದ ಬ್ರಾನ್ಸನ್ ನನಸಾಗಿಸಿಕೊಂಡಿದ್ದಾರೆ. ಈ ಮೂಲಕ, ಖಾಸಗಿಯಾಗಿ ಅಂತರಿಕ್ಷ ಯಾನ ಮಾಡಿದ, ಆಸ್ಟ್ರೋನಾಟ್ ಅಲ್ಲದ ಜಗತ್ತಿನ ಮೊದಲ ವ್ಯಕ್ತಿ ಎಂಬ ಹಿರಿಮೆಗೂ ಬ್ರಾನ್ಸನ್ ಪಾತ್ರರಾಗಿದ್ದಾರೆ. ಈ ಮನುಷ್ಯನ ಇಚ್ಛಾಶಕ್ತಿಯ ಬಲ ಇಷ್ಟು ಗಟ್ಟಿಯಿದ್ದೀತು ಎಂಬುದನ್ನು ಊಹಿಸಲು ಕಷ್ಟಸಾಧ್ಯ.

ಆದರೆ ಇದೇ ಹೊತ್ತಲ್ಲೇ, ಹತ್ತು ಬ್ರಾನ್ಸನ್‌ಗಳಿಗೆ ಸಮ ಎನ್ನುವಂತೆ ಲಕ್ಷ್ಮಿ ಪುತ್ರನೇ ಆಗಿರುವ ಅಮೆಜಾನ್‌ನ ಸಿಇಒ ಜೆಫ್ ಬಿಜೋಸ್ ಕೂಡ ಬ್ರಾನ್ಸನ್ ರೀತಿಯೇ ಗುರಿ ಇಟ್ಟುಕೊಂಡೇ ಕೆಲಸ ಆರಂಭಿಸಿದ್ದರು. ಅಂತರಿಕ್ಷ ಯಾನವು ಬ್ರಾನ್ಸನ್ ರೀತಿ ಬಿಜೋಸ್ ಅವರಿಗೆ ಬಾಲ್ಯದ ಕನಸಾಗಿರಲಿಲ್ಲ. ಇದನ್ನು ಅವರು ಒಂದು ವ್ಯವಹಾರವಾಗಿ ನೋಡುತ್ತಿದ್ದರು. ಸದ್ಯಕ್ಕಂತೂ ಎಲ್ಲ ಕ್ಷೇತ್ರ ಮತ್ತು ರಂಗದಲ್ಲಿ ಎಲ್ಲೆಡೆಯೂ ಭಾರಿ ಪೈಪೋಟಿಯಿದೆ. ಈಗ ಸದ್ಯ ಖಾಲಿ ಇರುವುದು ಎಂದರೆ ಅಂತರಿಕ್ಷ ಮಾತ್ರ. ಈ ಕ್ಷೇತ್ರದಲ್ಲಿ ತಾನೇಕೆ ಹೊಸದೊಂದು ಪ್ರಯತ್ನ ಮಾಡಬಾರದು ಎಂದು ಬಿಜೋಸ್ ತಾಲೀಮು ನಡೆಸುತ್ತಲೇ ಇದ್ದರು. ಅದಕ್ಕಾಗಿಯೇ ಬ್ಲೂ ಒರಿಜಿನ್ ಹೆಸರಿನ ರಾಕೆಟ್ ರೆಡಿ ಮಾಡಿಕೊಂಡರು. ತನ್ನೆಲ್ಲ ಸಿದ್ಧತೆಯ ನಂತರ ಅಂತಿಮವಾಗಿ ಎರಡು ದಿನದ ಹಿಂದಷ್ಟೇ (ಜುಲೈ 20) ಬಿಜೋಸ್ ಕೂಡ ತಮ್ಮ ಮೊದಲ ಅಂತರಿಕ್ಷ ಯಾನವನ್ನು ಯಶಸ್ವಿಯಾಗಿ ಪೂರೈಸಿ ಬಂದರು. ಈಗ ಇವರ ಹಿಂದೆಯೇ ಟೆಸ್ಲಾದ ಇಲಾನ್ ಮಸ್ಕ್ ಕೂಡ ಸ್ಪೇಸ್ ಎಕ್ಸ್ ಎಂಬ ತಮ್ಮದೇ ಸಂಸ್ಥೆಯ ಮೂಲಕ ಸ್ಪೇಸ್‌ನಲ್ಲಿ ರೇಸ್ ಆಡಲು ಸಿದ್ಧವಾಗಿದ್ದಾರೆ. ಬಹುಶಃ ಒಂದು ದಶಕದ ಒಳಗೆಯೇ ಅಂತರಿಕ್ಷದಲ್ಲೂ ಕೂಡ ಟ್ರಾಫಿಕ್ ಜಾಮ್ ಆದರೂ ಅಚ್ಚರಿ ಪಡಬೇಕಿಲ್ಲ.

ಇದೆಲ್ಲದರ ನಡುವೆ ಬ್ರಾನ್ಸನ್ ತೆಗೆದುಕೊಂಡ ನಿರ್ಧಾರದ ಬಗ್ಗೆ ಹಲವೆಡೆ ಟೀಕೆಗಳು ಕೇಳಿ ಬಂದವು. ಹಾಗೆ ನೋಡಿದರೆ, ಈ ವರ್ಷ ಅಂತರಿಕ್ಷಕ್ಕೆ ಹಾರುವ ಯಾವುದೇ ಸಿದ್ಧತೆ ಮತ್ತು ಯೋಜನೆಗಳನ್ನು ಬ್ರಾನ್ಸನ್ ಹೊಂದಿರಲಿಲ್ಲ. ಆದರೆ, ಬಿಜೋಸ್ ಅವರು ಜುಲೈ 20ಕ್ಕೆ ತಮ್ಮ ಯಾನದ ಟ್ರಿಪ್ ಟೈಂ ಟೇಬಲ್ ಇದೆ ಎಂದು ಘೋಷಣೆ ಮಾಡಿದ್ದರ ಪರಿಣಾಮ ಬ್ರಾನ್ಸನ್ ಅವಸರಕ್ಕೆ ಬಿದ್ದರು. ಖಾಸಗಿಯಾಗಿ ಅಂತರಿಕ್ಷಕ್ಕೆ ಹಾರಿದ ಮೊದಲಿಗ ನಾನಾಗಬೇಕು ಎಂಬ ಅವಸರ, ಆತುರಕ್ಕೆ ಬಿದ್ದು ತರಾತುರಿಯಲ್ಲಿ ಯಾನ ಕೈಗೊಂಡಿದ್ದಾರೆ ಎಂದು ಅಪಹಾಸ್ಯಗಳೂ ಕೇಳಿ ಬಂದವು. ಹಾಗೆ ನೋಡಿದರೆ, ವರ್ಜಿನ್ ಗ್ಯಾಲಕ್ಟಿಕ್ ಭೂಮಿಯಿಂದ ಹಾರಿದ್ದೇ 85-90 ಕಿಲೋ ಮೀಟರ್ ತನಕ ವಷ್ಟೇ. ಇದು ಅಂತರಿಕ್ಷ(ಜೀರೋ ಗ್ರಾವಿಟಿ)ದ ಅನುಭವ ನೀಡುವುದೇ ಇಲ್ಲ. ಕರ್ಮನ್ ಲೈನ್ (atmosphere-space ನಡುವಿನ ಅಂತರ) ಇರುವುದೇ 100 ಕಿಮೀ ನಂತರ ಎಂಬುದು ಅಮೆಜಾನ್ ಕಂಪನಿ ವಾದ. ಅಮೆರಿಕದ ನಾಸಾ ಪ್ರಕಾರ 85 ಕಿಮೀ ಅಂತರದಲ್ಲಿಯೇ ಕರ್ಮನ್ ಲೈನ್ ಇದೆ ಎಂಬುದು ವರ್ಜಿನ್ ಅವರ ಪ್ರತಿವಾದ. 2011ರ ಏಪ್ರಿಲ್‌ನಲ್ಲಿ, ಡೆನಿಸ್ ಟಿಟೋ ಎಂಬ ಅಮೆರಿಕದ ಕುಬೇರನೊಬ್ಬ 20ಮಿಲಿಯನ್ (ಇಂದಿನ ಸುಮಾರು 149 ಕೋಟಿ) ಹಣವನ್ನು ನೀಡಿ, ಆಸ್ಟ್ರೋನಾಟ್‌ಗಳ ಜತೆ ರಾಕೆಟ್‌ನಲ್ಲಿ ಕುಳಿತು ಅಂತಾರಾಷ್ಟ್ರೀಯ ಸ್ಪೇಸ್ ಸ್ಟೇಷನ್‌ನಲ್ಲಿ ಬರೋಬ್ಬರಿ ಎಂಟು ದಿನ ಕಳೆದು ಬಂದಿದ್ದಾರೆ. ಹಾಗೆ ನೋಡಿದರೆ, ಟೂರ್‌ನಂತೆ ಅಂತರಿಕ್ಷಕ್ಕೆ ಹೋಗಿ ಬಂದ ಜಗತ್ತಿನ ಮೊದಲ ವ್ಯಕ್ತಿಯೆಂದು ಟಿಟೋರನ್ನೇ ಕರೆಯಬೇಕು ಎಂಬ ಮಾತುಗಳೂ ಕೇಳಿಬಂದಿವೆ.

ಇನ್ನಷ್ಟು ದಿನ ಈ ಹಗ್ಗಜಗ್ಗಾಟ ಇದ್ದದ್ದೇ. ಅದೆಲ್ಲವೂ ಸಹಜ, ಮುಂದುವರಿಯಲಿ ಕೂಡ. ಆದರೆ, ತಮ್ಮದೇ ಸ್ವಂತದ ಸ್ಪೇಸ್ ಪ್ಲೇನ್‌ನಲ್ಲಿ ಅಂತರಿಕ್ಷಕ್ಕೆ ಹೋಗಿ ಬಂದ ಮೊದಲ ವ್ಯಕ್ತಿ ಎಂಬ ದಾಖಲೆಯನ್ನಂತೂ ರಿಚರ್ಡ್ ಬ್ರಾನ್ಸನ್ ಬರೆದಿದ್ದಾರೆ. ಈ ಮೂಲಕ ಜಗತ್ತನ್ನೆಲ್ಲ ಸುತ್ತಿ ಮುಗಿಸಿದವರಿಗೆ, ಗುಂಡಿಗೆ ಗಟ್ಟಿ ಇರುವವರಿಗೆ, ಭಾರಿ ದುಡ್ಡು ಹೊಂದಿರುವವರಿಗೆ ಹೊಸದೊಂದು ಲೋಕವಂತೂ ಈಗ ತೆರೆದು ಕೊಂಡಿದೆ. ಸದ್ಯದ ವರ್ಜಿನ್ ಕಂಪನಿ ಹೇಳುವ ಪ್ರಕಾರ ಸುಮಾರು 600 ಜನರು ಸ್ಪೇಸ್ ಟೂರ್ ಮಾಡಲು ಸೀಟ್ ಬುಕ್ ಮಾಡಿಕೊಂಡಿದ್ದಾರೆ. ಆದರೆ, ಒಂದು ಟಿಕೆಟ್ ಬೆಲೆ ಸದ್ಯ 2ರಿಂದ 2.5 ಕೋಟಿಯಿದೆ. ಸದ್ಯಕ್ಕಿದು ಆರಂಭವಾಗಿರುವ ಕಾರಣ ಇಷ್ಟೊಂದು ತುಟ್ಟಿಯಿದ್ದು, ತಂತ್ರಜ್ಞಾನದಲ್ಲಿ ಅಭಿವೃದ್ಧಿ ಮತ್ತು ಎದುರಾಳಿ ಕಂಪನಿಗಳ ದೆಸೆಯಿಂದಾಗಿ ಒಂದು ಟಿಕೆಟ್‌ಗೆ 30 ರಿಂದ 35 ಲಕ್ಷದಷ್ಟು ಆಗಬಹುದು ಎಂದು ಅಂದಾಜಿಸಲಾಗಿದೆ. ಮುಂದೆ ನಾವು-ನೀವೂ ಕೂಡ ಸ್ಪೇಸ್ ಟ್ರಿಪ್ ಹೋಗಿ ಬಂದು, ಭೂಮಿಯನ್ನು ಮೇಲಿನಿಂದ ನೋಡಿಕೊಂಡು, ನಮ್ಮ ಮೈ ಭಾರವನ್ನೆಲ್ಲ ಕಳೆದುಕೊಂಡು ತೇಲುತ್ತ ಹೊಸ ಅನುಭವ ಪಡೆವ ದಿನಗಳು ದೂರವೇನಿಲ್ಲ.

ಇಷ್ಟೆಲ್ಲವೂ ಇಷ್ಟು ಬೇಗ ಸಾಧ್ಯ ಎನಿಸುತ್ತಿರುವುದು ಬಾಲಕನೊಬ್ಬ ತಾನು ಅಂತರಿಕ್ಷಕ್ಕೆ ಹೋಗಬೇಕು ಎಂದು ಕಂಡ ಕನಸಿನ ಪರಿಣಾಮದಿಂದ. ಕನಸುಗಳಿಗೆ ಅಂಥದ್ದೊಂದು ಅವ್ಯಕ್ತ ಶಕ್ತಿಯಿದೆ. ಕನಸುಗಳು ಅರಳಿ ಮರದ ಬೀಜವಿದ್ದಂತೆ, ಬೀಜ ಮೊಳಕೆ ಒಡೆದು ಮರವಾದರೆ ಎಷ್ಟು ವಿಶಾಲವಾಗಬಹುದು ಎಂದು ಅಂದಾಜಿಸಿ ಹೇಳುವುದು ಕಷ್ಟ. ಬ್ರಾನ್ಸನ್‌ಗೆ ಬಾಲ್ಯದಲ್ಲಿಯೇ ತಾನು ಅಂತರಿಕ್ಷಕ್ಕೆ ಹೋಗಬೇಕು ಎಂಬ ಕನಸಿತ್ತು. ಆದರೆ, ಅದನ್ನು ಅಂದುಕೊಂಡ ಮಾತ್ರಕ್ಕೆ ಆಗಿಯೇ ಬಿಡುತ್ತದೆ ಎಂದು ಹೇಳಲಾಗದು ಎಂಬುದು ಬ್ರಾನ್‌ಗೆ ಗೊತ್ತಿತ್ತು. ಆದ್ದರಿಂದಲೇ ಅವರು ಅವಸರ ಮಾಡಲಿಲ್ಲ. ಮೊದಲು ತನ್ನ ವರ್ಜಿನ್ ಕಂಪನಿಯನ್ನು ಬೆಳೆಸ ತೊಡಗಿದರು. ಕಂಪನಿಯೂ ಬೆಳೆಯುವ ಜತೆ ಜತೆಗೆ ತಮ್ಮೊಳಗಿದ್ದ ಹುಚ್ಚು ಸಾಹಸಿಯನ್ನೂ ಅವರು ಬೆಳಸ ತೊಡಗಿ ದರು. ಹಾಟ್ ಏರ್ ಬಲೂನ್‌ನಲ್ಲಿ ತಿರುಗಬೇಕು ಎನಿಸಿದರೆ ಹಿಂದೆ ಮುಂದೆ ಯೋಚನೆ ಮಾಡಲಿಲ್ಲ. ತನ್ನ ಜೀವಕ್ಕೇನಾದರೂ ಅಪಾಯವಾದರೆ ಎಂದು ಭಯ ಪಡಲಿಲ್ಲ. ಆಳ ಸಮುದ್ರದಲ್ಲಿ ಸೀ- ಡೈವಿಂಗ್ ಹೋಗಿ ಒಂದೇ ಗುಟುಕಿಗೆ ಮನುಷ್ಯರನ್ನು ನುಂಗಿ ಹಾಕಬಲ್ಲ ಶಾರ್ಕ್, ವೇಲ್‌ನಂಥ ಜೀವಿಗಳನ್ನು ನೋಡಲು ಬ್ರಾನ್ಸನ್ ಹಿಂಜರಿಯಲಿಲ್ಲ.

ಮಜವಾಗಿ ಕೆಲಸ ಮಾಡುವುದೇ ಯಶಸ್ಸಿನ ಗುಟ್ಟು. ನಾವು ಮಾಡುವ ಕೆಲಸವು ಯಶಸ್ವಿಯಾಗುತ್ತ ಹೋದಂತೆ, ನಾವು ಕಂಡ ಕನಸುಗಳ ಸಾಕಾರವು ಸುಲಭ ಸಾಧ್ಯ ಎಂಬುದನ್ನು ಬ್ರಾನ್ಸನ್ ಅರಿತಿದ್ದರು. ಬದುಕನ್ನು ಇಡಿಯಾಗಿ ಹೇಗೆ ಬದುಕಬೇಕು ಎಂಬುದನ್ನು ಅರಿತಿದ್ದರು. ಈಗೊಮ್ಮೆ ಸೋತಿದ್ದೇವೆ ಎಂದರೆ ಗೆಲುವನ್ನು ಪಡೆಯದೇ ಬಿಟ್ಟಿದ್ದೇವೆ. ಮತ್ತೊಮ್ಮೆ, ಮಗದೊಮ್ಮೆ ಪ್ರಯತ್ನ ಪಟ್ಟರೆ ನಮ್ಮ ಕೈಗೆಟುಕದೇ ಇದ್ದ ಗೆಲುವೂ ಕೂಡ ನಮ್ಮದೇ ಆಗುವುದರಲ್ಲಿ ಅನುಮಾನವೇ ಇಲ್ಲ ಎಂಬುದು ಬ್ರಾನ್ಸನ್ ಅವರ ಸಿದ್ಧಾಂತ. ತನ್ನ ನಂಬಿಕೆಯಂತೆಯೇ ಬದುಕಿ, ತನ್ನೆಲ್ಲ ಕನಸುಗಳನ್ನೂ ನನಸು ಮಾಡಿಕೊಳ್ಳುತ್ತಿರುವ 71 ವರ್ಷಗಳ ಚಿರ ಯುವಕ ರಿಚರ್ಡ್ ಬ್ರಾನ್ಸನ್ ನಮಗೆಲ್ಲರಿಗೂ ಜೀವನ ಪಾಠ ಹೇಳಿಕೊಡುತ್ತಿದ್ದಾರೆ. ಅದರಲ್ಲಿ ಒಂದಷ್ಟಾದರು ಪಾಲಿಸಿದರೆ ನಮ್ಮ ಕನಸುಗಳೇನು ಬರೀ ಹಗಲುಗನಸಾಗಿ ಉಳಿಯಲಾರವು. ಏನಂತೀರ?

ದಾಖಲೆಯ ದಾಖಲಾತಿಯತ್ತ ಸರಕಾರಿ ಶಾಲೆಗಳು

ಅಭಿಪ್ರಾಯ

ಭಾರತಿ.ಎ., ಕೊಪ್ಪ

bharathikoppa101@gmail.com

‘ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ’ ಎಂಬ ವಿದ್ಯಾ ದೇಗುಲಕ್ಕೆ ತಮ್ಮ ಮಕ್ಕಳನ್ನು ದಾಖಲಾತಿ ಮಾಡಿ, ಮಕ್ಕಳಿಗೆ ವಿದ್ಯೆಯೆಂಬ ಪಥದಲ್ಲಿ ಸಾಗುವಂತೆ ಮುನ್ನಡೆಸುವ ಪೋಷಕರು ಮತ್ತು ಆ ಹಾದಿಯಲ್ಲಿ ಸಾಗುವ ಮಕ್ಕಳ ಮನದಂಗಳದಲ್ಲಿ ಕನಸುಗಳು ನೂರೆಂಟಿರುತ್ತವೆ. ಸುಮಾರು ಒಂದು ದಶಕದಿಂದ ಈಚೆಗೆ ಪೋಷಕರು ಸಾಮಾನ್ಯವಾಗಿ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸಿದರೆ ಮಾತ್ರ ಪರಿಪೂರ್ಣ ಶಿಕ್ಷಣ ಲಭಿಸುತ್ತದೆ ಎಂಬ ಮನಸ್ಥಿತಿಯನ್ನು ತಳೆದಿದ್ದರು. ಸರಕಾರಿ ಶಾಲೆಗಳು ಬಹಳಷ್ಟು ಉತ್ತಮವಾಗಿದ್ದರೂ ಕೂಡ ಖಾಸಗಿ ಶಾಲೆಗಳತ್ತ ಪೋಷಕರ ಚಿತ್ತ ಕಳೆದ ದಶಕದಲ್ಲಿ ಸಾಮಾನ್ಯವಾಗಿತ್ತು.

ಆದರೀಗ ಕಾಲ ಬದಲಾಗಿದೆ. ‘ಕಾಲಕ್ಕೆ ತಕ್ಕಂತೆ ಕೋಲ ಕಟ್ಟಬೇಕು’ ಎಂಬ ಮಾತು ಇದೀಗ ಅಕ್ಷರಶಃ ನಿಜವಾಗುತ್ತಿದೆ. ಕಳೆದ ಸುಮಾರು ಒಂದೂವರೆ ವರ್ಷದಿಂದ ಕಾಡುತ್ತಿರುವ ಕರೋನಾ ಜನಸಾಮಾನ್ಯರಿಗೆ ಬಹು ದೊಡ್ಡ ಹೊಡೆತ ನೀಡಿದೆ. ಶಿಕ್ಷಣ ಕ್ಷೇತ್ರದಲ್ಲಂತೂ ಮಕ್ಕಳಿಗೆ ಮುಖಾಮುಖಿ ಕಲಿಕೆ ಸಿಗದೆ ಅಗಾಧ ನಷ್ಟವಾಗಿದೆ. ಆದರೆ ಈ ಸಮಯದಲ್ಲಿ ಶಾಲಾ ದಾಖಲಾತಿಯ ವಿಚಾರದಲ್ಲಿ ಮತ್ತೆ ಸರಕಾರಿ ಶಾಲೆ ದಾಖಲೆ ಬರೆವ ಇತಿಹಾಸ ಮರುಕಳಿಸುವಂತಿದೆ. ಸುಮಾರು 70-80ರ ದಶಕದಲ್ಲಿ ಎಲ್ಲರೂ ಸರಕಾರಿ ಶಾಲೆಗಳಲ್ಲಿ ಓದಿ, ಯಶಸ್ವಿ ಶಿಕ್ಷಣ ಪಡೆಯುತ್ತಿದ್ದರು. ಆದರೀಗ ಖಾಸಗಿ ಶಾಲೆಗಳ ದಾಖಲಾತಿಯ ಭರಾಟೆಯ ನಡುವೆಯೂ ಅದೇ ಸರಕಾರಿ ಶಾಲೆಗಳತ್ತ ಇದೀಗ ಪೋಷಕರು ಮತ್ತೆ ಮುಖ ಮಾಡುತ್ತಿದ್ದಾರೆ. 2021-22ನೇ ಸಾಲಿನ ಕೇವಲ 15 ದಿನಗಳ ದಾಖಲಾತಿಯ ಮಾಹಿತಿಯನ್ವಯ ಸರಕಾರಿ ಶಾಲೆಗಳಲ್ಲಿ 16,52,613 ಮಕ್ಕಳು,ಅನುದಾನಿತ ಶಾಲೆಗಳಲ್ಲಿ 3,10,883 ಮಕ್ಕಳು ಮತ್ತು ಖಾಸಗಿ ಶಾಲೆಗಳಲ್ಲಿ 4,48,699 ಮಕ್ಕಳು ದಾಖಲಾಗಿರುವುದು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಗಳತ್ತ ಮಕ್ಕಳು ಮುಖ ಮಾಡಿರುವುದಕ್ಕೆ ಸಾಕ್ಷಿಯಾಗಿದೆ.

ಕರೋನಾ ತಂದೊಡ್ಡಿದ ಆರೋಗ್ಯ ಕಾಳಜಿ ಪೋಷಕರ ಮನದಲ್ಲಿ, ಮಕ್ಕಳು ದೂರದ ಖಾಸಗಿ ಶಾಲೆಗಳಲ್ಲಿ ಓದುವುದಕ್ಕಿಂತ ಮನೆಯ ಸಮೀಪದ ಸರ್ಕಾರಿ ಶಾಲೆಗಳಲ್ಲಿ ಓದುವುದು ಉತ್ತಮ’ ಎಂಬ ಭಾವನೆಯನ್ನು ಬಿತ್ತಿದೆ. ಅದರೊಂದಿಗೆ ಗ್ರಾಮೀಣ ಭಾಗಗಳಲ್ಲಿ ನೆಟ್ವರ್ಕ್ ಕೊರತೆ ಉಂಟಾಗಿ ಖಾಸಗಿ ಶಾಲೆಗಳು ನೀಡುವ ಆನ್‌ಲೈನ್ ಶಿಕ್ಷಣಕ್ಕೆ ಪರದಾಡುವುದಕ್ಕಿಂತ, ಮನೆಯ ಸಮೀಪದ ಸರಕಾರಿ ಶಾಲಾ ಶಿಕ್ಷಕರು ನೀಡುವ ವಿದ್ಯಾಗಮ ಶಿಕ್ಷಣ, ಮನೆ ಭೇಟಿಯಂತಹವು ಮಕ್ಕಳಿಗೆ ಹೆಚ್ಚು ಉಪಯುಕ್ತ ಎಂಬ ಭಾವವು ಹಲವು ಪೋಷಕರಲ್ಲಿ ಮೂಡಿದೆ. ಕರೋನಾ ತಂದಿಟ್ಟ ಲಾಕ್‌ಡೌನ್ ಆರ್ಥಿಕವಾಗಿ ಪೋಷಕರಿಗೆ ಬಹುದೊಡ್ಡ ಪೆಟ್ಟು ಕೊಟ್ಟಿದ್ದು, ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕ ಪಾವತಿ ನುಂಗಲಾರದ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಶುಲ್ಕದ ಹೊಡೆತಕ್ಕಿಂತ ಸರಕಾರಿ ಶಾಲೆಯ ಶಿಕ್ಷಣವು ಉತ್ತಮ ಗುಣಮಟ್ಟದಿಂದ ಕೂಡಿದ್ದು,ಉಚಿತವಾಗಿ ದೊರೆಯುತ್ತದೆ ಎಂಬುದು ಕೆಲವು ಪೋಷಕರಿಗೆ ಮನದಟ್ಟಾದಂತಿದೆ.

ಹಲವೆಡೆ ಸ್ವತಃ ಶಾಲಾ ಶಿಕ್ಷಕರೇ ಶಾಲಾ ಗೋಡೆಗಳಿಗೆ ಬಣ್ಣದ ಚಿತ್ತಾರ ಬರೆದು ಸುಂದರವಾಗಿಸಿದ್ದರೆ, ಕೆಲವೆಡೆ ದಾನಿಗಳ ಸಹಕಾರದಿಂದ ಗೋಡೆಗಳ ಚಿತ್ತಾರಗಳನ್ನು ಬರೆಸಿದ್ದಾರೆ, ಇನ್ನೂ ಕೆಲವೆಡೆ ಶಾಲಾ ಭೌತಿಕ ಸೌಲಭ್ಯವನ್ನು ಉನ್ನತೀಕರಿಸಿದ್ದಾರೆ. ಶಾಲಾ ಎಸ್‌ಡಿಎಂಸಿಯವರು ಕೂಡ ಪೋಷಕರ ಮನವೊಲಿಸಿ ಶಾಲಾ ದಾಖಲಾತಿಯನ್ನು ಹೆಚ್ಚಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಕೆಲವೆಡೆ ಸರಕಾರಿ ಶಾಲೆಗಳ ಮುಂದೆ ಪೋಷಕರು ತಮ್ಮ ಮಗುವಿನ ದಾಖಲಾತಿಗಾಗಿ ಸರದಿ ಸಾಲಿನಲ್ಲಿ ನಿಂತಿರುವುದು ವರದಿಯಾಗುತ್ತಿದ್ದು, ಸರಕಾರಿ ಶಾಲೆಗಳಿಗೆ ಇದರಿಂದ ಆನೆಬಲವು ಬಂದಂತಾಗಿದೆ ಎಂಬುದಂತೂ ದಿಟ. 'ನಮ್ಮ ಸರಕಾರಿ ಶಾಲೆ,ನಮ್ಮ ಹೆಮ್ಮೆ’ ಎಂಬ ಮನಸ್ಥಿತಿ ಜನರಲ್ಲಿ ಮೂಡಿ, ಸರಕಾರಿ ಶಾಲೆಗಳ ಉನ್ನತೀಕರಣದಲ್ಲಿ ನಾಗರಿಕರು ಕೈಜೋಡಿಸಿದರೆ ಸರಕಾರಿ ಶಾಲೆಗಳು ಮತ್ತೆ ಉತ್ತುಂಗಕ್ಕೇರುವುದರಲ್ಲಿ ಸಂಶಯವಿಲ್ಲ.

ಭಟ್ಟರ್ ಸ್ಕಾಚ್

- **ಶಿವಲಿಂಗಪ್ಪ ಸಿಂಗಸೆಟ್ಟಿ (ಇಮೇಲ್ ಮೂಲಕ)**

ಭಟ್ರೇ, ರಿಚರ್ಡ್ ಬ್ರಾನ್ಸನ್ ಬಾಹ್ಯಾಕಾಶದಲ್ಲಿ ಹನಿಮೂನ್‌ಗೆ ಕರೆದರೆ ಹೋಗ್ತೀರಾ?

- ಅಲ್ಲಿ ಹೋದರೂ ಮಾಡೋದು ಅದೇ ತಾನೇ?!

- **ವಾದಿರಾಜ ದಂಡಿನ (ಇಮೇಲ್ ಮೂಲಕ)**

ಷೇರು ಮಾರುಕಟ್ಟೆ ಮತ್ತು ಹೆಂಡತಿ ಎರಡೂ ತುಂಬಾನೇ ಸೆಂಟಿಮೆಂಟಲ್ ಯಾಕೆ, ಭಟ್ರೇ?

- ನೀವು ಈ ಸಾಲಿನಲ್ಲಿ ಗರ್ಲ್ ಫ್ರೆಂಡನ್ನು ಯಾಕೆ ಬಿಟ್ಟಿರಿ, ಗೊತ್ತಾಗ್ತಾ ಇಲ್ಲವಲ್ಲ?!

- **ಪ್ರದೀಪ್ ನಾಯಕ, ಬೆಂಗಳೂರು**

ಭಟ್ರೇ, ಸಾಲ ಕೊಡ್ತೀನಿ, ಕ್ಲಬ್ ಹೌಸಿಗೆ ಬಂದು ತೆಗೆದುಕೊಂಡು ಹೋಗು ಅಂತ ಇಲ್ಲೊಬ್ಬ ಹೇಳ್ತಾನಲ್ಲ?

- ಮೊನ್ನೆ ಕ್ಲಬ್ ಹೌಸಿನಲ್ಲಿ ಗುಂಡು ಹಾಕೋಣ ಬನ್ನಿ ಅಂತ ಕರೆದವರಾ?!

- **ರೇವತಿ, ಮಲ್ಲೇಶ್ವರ**

ಭಟ್ರೇ, ಕ್ಲಬ್ ಹೌಸಿನಲ್ಲಿ ನಿಮ್ಮನ್ನು ಸುಲಭವಾಗಿ ಭೇಟಿಯಾಗಬಹುದು ..ಆದರೆ ?

- ಸಮಸ್ಯೆ ಆಗೋದು, ನೀನು ‘ಆದರೆ..’ ಎಂದು ಹೇಳಿದಾಗಲೇ!

- **ಚಂದ್ರಕಾಂತ ಹೆಗಡೆ, ಯಲ್ಲಾಪುರ**

ಭಟ್ರೇ, ಕ್ಲಬ್ ಹೌಸ್‌ಗೆ ಮೊಯಿಲಿ ಅವರನ್ನು ಕರೆಯಿಸುವುದಿಲ್ಲವಾ?

- ಕರೆಯಿಸಿದರೆ ಅವರ ಮಹಾಕಾವ್ಯ ಓದಲು ಆರಂಭಿಸಿದರೆ ?!

- **ಕುಮಾರನಾಥ ಬಿ.ಬಿ., (ಇಮೇಲ್ ಮೂಲಕ)**

ಭಟ್ರೇ, ನೀವು ಕ್ಲಬ್ ಹೌಸಿನಲ್ಲಿದ್ದರೆ ನಿಮ್ಮ ಮನೆಯವರು ಬೇಸರ ಮಾಡಿಕೊಳ್ಳುವುದಿಲ್ಲವಾ?

- ಅವಳೂ ಅಲ್ಲೇ ಇರ್ತಾಳಲ್ಲ?!

- **ಪ್ರಶಾಂತ ಕೆ.ಹೆಬ್ಬಾರ, (ಇಮೇಲ್ ಮೂಲಕ)**

ಭಟ್ರೇ, ವಿಶ್ವವಾಣಿ ಕ್ಲಬ್‌ಗೆ ಬರದಿದ್ದರೆ ನಿದ್ದೆಯೇ ಬರುವುದಿಲ್ಲವಲ್ಲ?

- ಅಲ್ಲಿ ಬಂದು ನಿದ್ದೆ ಮಾಡದಿದ್ದರೆ ಸಾಕು!

- **ಪ್ರಮೀಳಾ, ಬೆಂಗಳೂರು**

ಭಟ್ರೇ, ಸಂಪಾದಕರು ಕಾಣೆಯಾಗಿದ್ದಾರಲ್ಲ?

- ಕ್ಲಬ್ ಹೌಸಿನಲ್ಲಿ ಹುಡುಕಿ, ಸಿಗಬಹುದು!

- **ಲಾವಣ್ಯ ಗೌಡ, ಪದ್ಮನಾಭನಗರ**

ಭಟ್ರೇ, ನೀವು ದಿನ ಕಳೆದಂತೆ ಯಂಗ್ ಆಗುತ್ತಿದ್ದೀರಲ್ಲ?

- ಯಂಗೆಂಗೋ ಆಗೋದಕ್ಕಿಂತ ಅದೇ ವಾಸಿಯಲ್ಲವೇ?!

- **ಮಹೇಶ ಉದಾರಿಕೊಪ್ಪ, (ಇಮೇಲ್ ಮೂಲಕ)**

ಭಟ್ರೇ, ನಿಮ್ಮ ಕ್ಲಬ್‌ನಲ್ಲಿ ಎಣ್ಣೆ ಸಿಗುತ್ತದಾ?

- ಎಣ್ಣೆ ಹಾಕಿ ಬಂದವರೂ ಸಿಗುವುದಿಲ್ಲ!

ಒಲಿಂಪಿಕ್ಸ್‌ನಲ್ಲಿ ಭಾರತೀಯ ಉತ್ಸಾಹ ಹೆಚ್ಚಿಸಿದ ಮೋದಿ



ಪ್ರಚಲಿತ

ಎಲ್.ಪಿ.ಕುಲಕರ್ಣಿ, ಬಾದಾಮಿ

edtoped@gmail.com

ಒಲಿಂಪಿಕ್ಸ್ ಪಂದ್ಯಗಳು. ಈ ಹೆಸರನ್ನು ಕೇಳಿದೊಡನೆ ಮನದಲ್ಲಿ ಏನೋ ಒಂದು ರೀತಿಯಲ್ಲಿ ರೋಮಾಂಚನವಾಗುತ್ತದೆ. ಜಗತ್ತಿನ ಅತಿ ಬಲಿಷ್ಠ, ತೀಕ್ಷ್ಣ, ಚುರುಕಿನ, ವೇಗದ, ವಿಶೇಷ ಕೌಶಲ್ಯಗಳಿಂದ ಕೂಡಿದ ಕ್ರೀಡಾಪಟುಗಳು ಆ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ. ಒಲಿಂಪಿಕ್ಸ್ ಪಂದ್ಯಗಳಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಕ್ರೀಡಾಪಟುವೂ ಸಹ ದೇಶ ಕಾಯೋ ಒಬ್ಬ ಸೈನಿಕನಿದ್ದಂತೆ. ತನ್ನೆಲ್ಲಾ ಶಕ್ತಿ, ಕೌಶಲ್ಯಗಳನ್ನು ಒರೆಗೆ ಹಚ್ಚಿ ಒಂದಾದರೂ ಪದಕ ಗೆದ್ದು ತನ್ನ ಮಾತೃ ಭೂಮಿಗೆ ಸಮರ್ಪಿಸಬೇಕೆಂದು ದೃಢ ನಿರ್ಧಾರದ, ಆತ್ಮವಿಶ್ವಾಸದಿಂದಲೇ ಮುನ್ನುಗ್ಗುವ ಸಂಕಲ್ಪ ಮಾಡಿರುತ್ತಾನೆ.

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಒಲಿಂಪಿಕ್ಸ್ ಪಂದ್ಯಗಳನ್ನು ನೋಡುವುದೇ ಒಂದು ಕಣ್ಣಿಗೆ ಹಬ್ಬ. ಇದೇ ಜುಲೈ 23 ರಿಂದ ಆಗಸ್ಟ್ 8ರವರೆಗೆ ಜಪಾನ್ ದೇಶದ ಟೋಕಿಯೊದಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟಗಳು ನಡೆ ಯಲಿವೆ. 1964, ಅಂದರೆ ಈಗ ಬರೊಬ್ಬರಿ 57 ವರ್ಷಗಳ ಹಿಂದೆ ಇದೇ ಟೋಕಿಯೊದಲ್ಲಿ ಒಲಿಂಪಿಕ್ಸ್ ಪಂದ್ಯಗಳು ಜರುಗಿದ್ದವು. ಈಗ ಮತ್ತೆ ಅಲ್ಲೇ ನಡೆಯುತ್ತಿವೆ ಎನ್ನುವುದೊಂದು ವಿಶೇಷ. ಈ ಬಾರಿ ಜಪಾನ್ ಚಕ್ರವರ್ತಿ ನರುಹಿಟೊ ಜುಲೈ 23ರಂದು ನಡೆಯುವ ಪಂದ್ಯಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. 61 ವರ್ಷದ ನರುಹಿಟೊ, ಟೋಕಿಯೊ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್‌ಗೂ ಗೌರವ ಪೋಷಕರಾಗಿದ್ದಾರೆ. ಈ ಒಲಿಂಪಿಕ್ ಕ್ರೀಡೆಗಳಿಗೆಂದೇ ರಚಿಸಿದ ಸಂವಿಧಾನದ ಪ್ರಕಾರ, ಆತಿಥೇಯ ದೇಶದ ಮುಖ್ಯಸ್ಥರಿಗೆ ಪಂದ್ಯಗಳ ಆರಂಭವನ್ನು ಘೋಷಿಸುವ ಅಧಿಕಾರವಿರುತ್ತದೆ. ಈ ಸಾರಿ ಇಂತಹ ಸುದೈವಕ್ಕೆ ನರುಹಿಟೊ ಪಾತ್ರರಾಗಿದ್ದಾರೆ.

ಸದ್ಯ ನಡೆಯಲಿರುವ ಈ ಟೋಕಿಯೊ ಒಲಿಂಪಿಕ್ಸ್ ಪಂದ್ಯಗಳಿಗಾಗಿಯೇ 339 ಪದಕಗಳನ್ನು ಸಿದ್ಧಪಡಿಸಲಾಗಿದೆ. ಇಲ್ಲೇನಿದೆ ಅಂತಹ ವಿಶೇಷ ಅಂತಿರಾ? ಇದುವರೆಗೆ ಅಲ್ಲಿರುವ ಗಣ್ಯವ್ಯಕ್ತಿಗಳು ಪಂದ್ಯಗಳಲ್ಲಿ ಗೆದ್ದ ಕ್ರೀಡಾಪಟುಗಳ ಕೊರಳಿಗೆ ಪದಕ ಮಾಲೆಯನ್ನು ಹಾಕಿ, ಕೈಗೆ ಹೂಗುಚ್ಛವನ್ನು ಕೊಟ್ಟು ಸನ್ಮಾನಿಸುತ್ತಿದ್ದದ್ದು ಸಂಪ್ರದಾಯವಾಗಿತ್ತು. ಆದರೆ, ಈ ಸಾರಿ, ಕರೋನಾ ಮಹಾಮಾರಿ ಜಗತ್ತನ್ನು ವ್ಯಾಪಿಸಿರುವುದರಿಂದ, ಗೆದ್ದ ಕ್ರೀಡಾಪಟುಗಳು ಗಣ್ಯರಿಂದ ಪದಕ ಧರಿಸುವುದರ ಬದಲಾಗಿ, ತಾವೇ ಕೊರಳಿಗೆ ಪದಕದ ಮಾಲೆಯನ್ನು ಹಾಕಿಕೊಂಡು ವಿಜೃಂಭಿಸುತ್ತಾರೆ! ಎಂಬುದಾಗಿ ಅಂತಾ ರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಧ್ಯಕ್ಷ ಥಾಮಸ್ ಬಾಚ್ ಹೇಳುತ್ತಾರೆ. ಪದಕಗಳನ್ನು ಟ್ರೇ(ತಟ್ಟೆ) ನಲ್ಲಿ ಇಡುವ ವ್ಯಕ್ತಿಗಳೂ ಸಹ ತಮ್ಮ ಕೈಗಳಿಗೆ ಗ್ಲೌಸ್ ಹಾಕಿರುತ್ತಾರೆ. ಈ ಸಾರಿ, ಪದಕ ಪ್ರದಾನ ಸಮಾರಂಭದಲ್ಲಿ ಕ್ರೀಡಾಪಟುಗಳು ಪರಸ್ಪರ ಹ್ಯಾಂಡ್ ಶೇಕ್ ಮಾಡುವಂತಿಲ್ಲ. ಈ ಹಿಂದೆ, ಕುಸ್ತಿ ಪಂದ್ಯಾವಳಿಯಲ್ಲಿ ಗೆದ್ದ ವ್ಯಕ್ತಿಯನ್ನು ರೆಫರಿಯಾದವನು, ಸೋತವನ ಜತೆ ಕೈಮಿಲಾಯಿಸಿ, ಅಪ್ಪುಗೆ ಮಾಡುವಂತೆ ಸೂಚಿಸುತ್ತಿದ್ದ. ಆದರೆ, ಈ ಸಾರಿ ಪರಸ್ಪರ ಅಪ್ಪುಗೆಯನ್ನೂ ನಿರ್ಬಂಧಿಸಲಾಗಿದೆ. ಅಲ್ಲದೇ, ಸಮಾರಂಭದಲ್ಲಿ ಕ್ರೀಡಾಪಟುಗಳು, ಅಧಿಕಾರಿಗಳು, ರೆಫರಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಆದೇಶಿಸಲಾಗಿದೆ.

1908ರ ಲಂಡನ್ ಒಲಿಂಪಿಕ್ಸ್ 187 ದಿನ ನಡೆದಿತ್ತು. ಏಪ್ರಿಲ್ 27 ರಂದು ಆರಂಭವಾದ ಒಲಿಂಪಿಕ್ಸ್ ಅಕ್ಟೋಬರ್ 31ರವರೆಗೂ ನಡೆದಿತ್ತು! 1900ರ ಪ್ಯಾರಿಸ್ ಒಲಿಂಪಿಕ್ಸ್ ಕೂಡ 5 ತಿಂಗಳು ನಡೆದಿತ್ತು. ಈ ಬಾರಿ ಟೋಕಿಯೊ ಒಲಿಂಪಿಕ್ಸ್ 17 ದಿನಗಳಲ್ಲೇ ಮುಕ್ತಾಯಗೊಳ್ಳಲಿದೆ. ಕಾರಣ ಕರೋನಾ. ಒಟ್ಟಿನಲ್ಲಿ ಕರೋನಾ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡದಂತೆ ಎಚ್ಚರವಹಿಸಲಾಗುತ್ತಿದೆ. ಪ್ರಸ್ತುತ, ಟೋಕಿಯೊದಲ್ಲಿ ನಡೆಯುತ್ತಿರುವ ಒಲಿಂಪಿಕ್ ಪಂದ್ಯಾವಳಿಗಳು ಇಷ್ಟೆಲ್ಲಾ ವಿಶೇಷತೆಗಳಿಂದ ಕೂಡಿವೆ.

2016ರಲ್ಲಿ ರಿಯೋದಲ್ಲಿ ನಡೆದ ಪಂದ್ಯಗಳಲ್ಲಿ ಭಾರತದಿಂದ 117 ಕ್ರೀಡಾಪಟುಗಳು ಭಾಗವಹಿಸಿದ್ದರು. ಸಾಮಲಿಕ್, ಕುಸ್ತಿಪಂದ್ಯದಲ್ಲಿ ಕಂಚಿನ ಪದಕ ಗೆದ್ದು ತಂದಿದ್ದಲ್ಲದೆ, ಬ್ಯಾಡ್ಮಿಂಟನ್‌ನಲ್ಲಿ, ಪಿ.ವಿ. ಸಿಂಧು, ಬೆಳ್ಳಿ ಪದಕ ಗೆದ್ದು, ಭಾರತದ ಹಿರಿಮೆಯನ್ನು ಹಿಮಾಲಯದ ಎತ್ತರಕ್ಕೆ ಒಯ್ದಿದ್ದರು. ಸದ್ಯ, ಟೋಕಿಯೊದಲ್ಲಿ ನಡೆಯಲಿರುವ ಒಲಿಂಪಿಕ್ ಪಂದ್ಯಗಳಲ್ಲಿ ಭಾರತದಿಂದ ಒಟ್ಟು 119 ಕ್ರೀಡಾಪಟುಗಳು (67 ಪುರುಷರು, 52 ಮಹಿಳೆಯರು) ಭಾಗವಹಿಸುತ್ತಿದ್ದಾರೆ. 121 ವರ್ಷಗಳ ಆಧುನಿಕ ಒಲಿಂಪಿಕ್ ಇತಿಹಾಸದಲ್ಲಿ, ಭಾರತ, ಒಟ್ಟು 28 ಪದಕಗಳನ್ನು ಗೆದ್ದಿದೆ. ವಿಚಿತ್ರವೆಂದರೆ, ಅಮೆರಿಕದ ಪ್ರಖ್ಯಾತ ಈಜುಗಾರ ಮೈಕೆಲ್ ಫೆಲ್ಪ್ಸ್ ಒಬ್ಬನೇ ಆಡಿದ 4 ಒಲಿಂಪಿಕ್ಸ್‌ಗಳಲ್ಲಿ 28 ಪದಕಗಳನ್ನು ತನ್ನದಾಗಿಸಿಕೊಂಡಿದ್ದಾರೆ!

ಈ ಮಧ್ಯೆ, ಟೋಕಿಯೊಗೆ ಹೊರಟುನಿಂತ ಭಾರತದ ಕ್ರೀಡಾಪಟುಗಳ ಹಾಗೂ ಅವರ ಪಾಲಕರ ಜತೆ ಪ್ರಧಾನಿ ನರೇಂದ್ರ, ಮೋದಿ ನಡೆಸಿದ ವರ್ಚುಯಲ್ ಸಂವಾದ ಎಂದೂ ಮರೆಯದಂತಿತ್ತು. ಈ ಸಂವಾದದಲ್ಲಿ ಕ್ರೀಡಾಪಟುಗಳ ಜೀವನ, ಕಷ್ಟ-ಕಾರ್ಪಣ್ಯಗಳ ಹಾಗೂ ಅವರ ಸಾಧನೆಯ ಹಾದಿಯನ್ನು ಮೆಚ್ಚಿ ಪ್ರಧಾನಿ ಮಾತನಾಡಿದರು. ತಾವು ಪ್ರಧಾನಿ ಎಂಬ ಹಮ್ಮುಬಿಮ್ಮನ್ನು ಪಕ್ಕಕ್ಕಿಟ್ಟು ಅವರ ಜತೆ ಆತ್ಮೀಯವಾಗಿ ಲೋಕಾಭಿರಾಮವಾಗಿ ಹಾಸ್ಯಪೂರ್ಣವಾಗಿ ಹರಟಿದರು. ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ಅವರ ಪಾಲಕರ ಜತೆ ಮಾತನಾಡುವಾಗ, ‘ಯಾವ ಹಿಟ್ಟಿನಿಂದ ತಯಾರಿಸಿದ ರೋಟಿ ನೀಡಿ ಮಗಳನ್ನು ಕುಸ್ತಿಪಟುವನ್ನಾಗಿ ಮಾಡಿದಿರಿ?’ ಎಂದು ಹಾಸ್ಯದ ಹೊನಲನ್ನು ಹರಿಸಿ ದರು. ಬ್ಯಾಡ್ಮಿಂಟನ್ ತಾರೆ ಆಂಧ್ರದ ಪಿ.ವಿ.ಸಿಂಧು ಅವರಿಗೆ ಐಸ್ ಕ್ರೀಂ ಇಷ್ಟವೆಂದು ಮೊದಲೇ ಅರಿತಿದ್ದ ಮೋದಿ, ‘ಮುಂದೆ ಜತೆಯಾಗಿ ಐಸ್ ಕ್ರೀಂ ತಿನ್ನೋಣ’ ಎಂದರು. ತಮಿಳುನಾಡು ಮೂಲದ ಶೂಟರ್, ಎಲವೆನಿಲ್ ವಲರಿಯನ್ ಪೋಷಕರಿಗೆ’ ವಣಕ್ಕಂ’ ನಮಸ್ಕಾರ ಎಂದು ಅವರ ಮಾತೃಭಾಷೆ ತಮಿಳನಲ್ಲೇ ಹೇಳಿದರು. ಬಾಕ್ಸರ್ ಆಶೀಶ್ ಕುಮಾರ್ ಜತೆ ಮಾತನಾಡುವಾಗ’ ನಿಮ್ಮ ತಂದೆ ಒಬ್ಬ ಶ್ರೇಷ್ಠ ಕಬಡ್ಡಿ ಆಟಗಾರರು. ನೀವ್ಯಾಕೆ ಬಾಕ್ಸರ್? ’ ಎಂದು ಪ್ರಶ್ನಿಸಿದರು. ಅದಕ್ಕೆ ಆಶಿಶ್, ‘ನನ್ನ ಸಹೋದರ ಕುಸ್ತಿಪಟು. ಆದರೆ, ನನ್ನ ಶರೀರ ಚಿಕ್ಕದು ಹೀಗಾಗಿ ಬಾಕ್ಸಿಂಗ್ ಆಯ್ಕೆ ಅನಿವಾರ್ಯವಾಯಿತು’ ಎಂದರು. ಜಾವಲಿನ್ ಥ್ರೋ ಕ್ರೀಡಾಪಟು ನೀರಜ್ ಚೋಪ್ರಾ ಅವರ ಸಾಧನೆಗೆ ಹ್ಯಾಟ್ಸಪ್ ಹೇಳಿದರು. ಮಹಿಳಾ ಬಾಕ್ಸರ್ ಮೇರಿಕೋಮ್ ಅವರಿಗೆ ‘ದೇಶದ ಕ್ರೀಡಾ ಕ್ಷೇತ್ರಕ್ಕೆ ನೀವು ಸ್ಫೂರ್ತಿ’ ಎಂದು ಕೊಂಡಾಡಿದರು. ಹೀಗೆ ಪ್ರತಿಯೊಬ್ಬ ಕ್ರೀಡಾಪಟುವನ್ನು ಬಹಳ ಆತ್ಮೀಯವಾಗಿ ಮಾತನಾಡಿಸುತ್ತಾ, ಅವರ ಸಾಧನೆಯನ್ನು ಹೊಗಳುತ್ತಾ ಹೋದ ಪ್ರಧಾನಿ, ಕೇವಲ ಪದಕ ಗೆಲ್ಲುವ ಒತ್ತಡದಿಂದ ಸ್ಪರ್ಧಿಸಬೇಡಿ, ದೇಶ ಸದಾ ನಿಮ್ಮ ಬೆಂಬಲಕ್ಕೆ ನಿಂತಿದೆ. ಆದರೆ, ನೀವು ನಿಮ್ಮ ಅದಮ್ಯ ಶಕ್ತಿಯನ್ನು ಪ್ರದರ್ಶಿಸಿ ಉತ್ತಮ ಸಾಧನೆಯನ್ನು ಮಾಡಬೇಕು. ‘ನೀವೇ ನಂಬರ್ ಒನ್’ ‘ನೀವೆಲ್ಲರೂ ಹೊಸಯುಗದ ಭಾರತದ ಸಾಧಕರು’ ಎಂದು ಹೃದಯತುಂಬಿ ಕೊಂಡಾಡಿದರು. ಹೀಗೆ ಗಂಟೆಗಿಂತಲೂ ಹೆಚ್ಚಿಗೆ ನಡೆದ ಪ್ರಧಾನಿ-ಕ್ರೀಡಾಪಟುಗಳ ಸಂವಾದ ಅವಿಸ್ಮರಣೀಯವಾಗಿತ್ತು.

ದೇಶದ ರಾಷ್ಟ್ರೀಯ ಕ್ರೀಡೆ ಹಾಕಿ. ಇದುವರೆಗೂ ನಡೆದಿರುವ ಒಲಿಂಪಿಕ್ಸ್ ಪಂದ್ಯಗಳಲ್ಲಿ, ಭಾರತದ ಹಾಕಿ ತಂಡವು ಆ್ಯಮಸ್ಟರ್ ಡ್ಯಾಂ (1928), ಲಾಸ್ ಏಂಜಲೀಸ್ (1932), ಬರ್ಲಿನ್ (1936), ಲಂಡನ್ (1948), ಹೆಲ್ಸಿಂಕಿ (1952), ಮೆಲ್ಬರ್ನ್ (1956), ಟೋಕಿಯೊ (1964), ಮಾಸ್ಕೊ (1980) ಗಳಲ್ಲಿ ಸತತವಾಗಿ 8 ಚಿನ್ನದ ಪದಕಗಳನ್ನು ಗೆದ್ದಿದೆ. 1960ರಲ್ಲಿ ರೋಮ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕಕ್ಕೆ ತೃಪ್ತಿ ಪಟ್ಟಿದ್ದರೆ, ಮೆಕ್ಸಿಕೊ ಸಿಟಿ (1968) ಹಾಗೂ ಮ್ಯೂನಿಚ್ (1972) ಗಳಲ್ಲಿ ನಡೆದ ಪಂದ್ಯಗಳಲ್ಲಿ ಕಂಚಿನ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಹೀಗೆ ಹಾಕಿ ಪಂದ್ಯ ಒಂದರಲ್ಲೆ ಒಟ್ಟು 11 ಪದಕಗಳನ್ನು ಭಾರತದ ಕ್ರೀಡಾಪಟುಗಳು ಗೆದ್ದು ತಂದಿದ್ದಾರೆ.

ವಿಶೇಷವಾಗಿ ನಮ್ಮ ದೇಶೀಯ ಕುಸ್ತಿ ಕ್ರೀಡೆಯ ಬಗ್ಗೆ ಗಮನಹರಿಸುವುದಾದರೆ, ಇದುವರೆಗೂ ಒಲಿಂಪಿಕ್ಸ್‌ನಲ್ಲಿ, ಭಾರತಕ್ಕೆ ಪುರುಷ ಹಾಗೂ ಮಹಿಳಾ ವಿಭಾಗದ ಕುಸ್ತಿ ಪಂದ್ಯಾವಳಿಗಳಲ್ಲಿ ಒಟ್ಟು 10 ಪದಕಗಳು ಸಂದಿವೆ. ಭಾರತ, ಆಗ ಒಲಿಂಪಿಕ್ಸ್‌ನಲ್ಲಿ ಗುಂಪು ಆಟ ಹಾಕಿಯಲ್ಲಿ ಚಿನ್ನದ ಪದಕಗಳನ್ನು ಗೆದ್ದು ಬೀಗುತ್ತಿತ್ತೆನೋ ನಿಜ. ಇದು ಕೇವಲ ಗುಂಪು ಕ್ರೀಡೆಗಳಿಗೆ ಸೀಮಿತವಾಗಿತ್ತು. ಆದರೆ, ವೈಯಕ್ತಿಕ ಕ್ರೀಡೆಗಳಿಗೆ ಪದಕಗಳೇ ದಕ್ಕಿದ್ದಿಲ್ಲ. ಇಂತಹ ಸಂದರ್ಭದಲ್ಲಿ ಕುಸ್ತಿಯಲ್ಲಿ ಪದಕ ತಂದ ಶ್ರೇಯಸ್ಸು ಕುಸ್ತಿಪಟು ಮಹಾರಾಷ್ಟ್ರದ ಕಾಶಾಬಾ ದಾದಾಸಾಹೇಬ್ ಜಾಧವ್‌ಗೆ ಸಲ್ಲುತ್ತದೆ. ಅದು 1952ರಲ್ಲಿ ಹೆಲ್ಸಿಂಕಿಯಲ್ಲಿ ನಡೆದ ಒಲಿಂಪಿಕ್ಸ್. ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಕರಾಡ್ ತಾಲೂಕಿನ ಗೋಲೇಶ್ವರ್ ಗ್ರಾಮದವರಾದ ಜಾಧವ್, ‘ಪಾಕೆಟ್ ಡೈನಾಮೊ’ ಎಂದೇ ಹೆಸರುವಾಸಿಯಾಗಿದ್ದರು. ಭಾರತಕ್ಕೆ ಕುಸ್ತಿಯಲ್ಲಿ ಕಂಚಿನ ಪದಕ ಗೆದ್ದು ತಂದು ಭಾರತದ ಕೀರ್ತಿಯನ್ನು ಹೆಚ್ಚಿಸಿದ್ದರು. ಜಾಧವ್, ಪದಕ ಗೆದ್ದು ತಮ್ಮ ಗ್ರಾಮಕ್ಕೆ ಮರಳುವ ಸಂದರ್ಭದಲ್ಲಿ, ಕರಾಡದ ರೈಲ್ವೇ ನಿಲ್ದಾಣದಿಂದ ಗೋಲೇಶ್ವರದವರೆಗೆ ದೊಡ್ಡ ಮೆರವಣಿಗೆಯೇ ನಡೆದಿತ್ತು. 151 ಚಕ್ಕಡಿಗಳಲ್ಲಿ ಅಭಿಮಾನಿಗಳು ಸೇರಿದ್ದರು. ಡೋಲು, ಕುಣಿತಗಳಿಂದ ಬಲು ವಿಜೃಂಭಣೆಯಿಂದ ಜಾಧವ್ ಅವರನ್ನು ಸ್ವಾಗತಿಸ ಲಾಗಿತ್ತು. ಇದಾದ ಬಳಿಕ ಕುಸ್ತಿಯಲ್ಲಿ ಇನ್ನೊಂದು ಪದಕಕ್ಕಾಗಿ 2008ರ ವರೆಗೂ ಕಾಯಬೇಕಾಯಿತು. ಆ ಸಾರಿ ಬೀಜಿಂಗ್‌ನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಸುಶೀಲ್ ಕುಮಾರ್ ಮತ್ತೆ ಕಂಚಿನ ಪದಕಕ್ಕೆ ಭಾಜನರಾದರು. ನಂತರ 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಸುಶೀಲ್ 66 ಕೆ.ಜಿ ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಪದಕ ತಂದು ಕೊಟ್ಟರು. ರಿಯೊ ಡಿ ಜನೈರೊದಲ್ಲಿ 2016 ರಲ್ಲಿ ನಡೆದ ಪಂದ್ಯದಲ್ಲಿ, ಸಾಕ್ಷಿ ಮಲಿಕ್, ಮಹಿಳೆಯರ ಫ್ರೀಸ್ಟೈಲ್ 58 ಕೆ.ಜಿ ವಿಭಾಗದಲ್ಲಿ ಕಂಚಿನ ಪದಕವನ್ನು ತಮ್ಮದಾಗಿಸಿ ಕೊಂಡರು. ಸದ್ಯ, ಟೋಕಿಯೋ ಒಲಿಂಪಿಕ್ಸ್‌ಗೆ ಪುರಷರ ಕುಸ್ತಿ ವಿಭಾಗದಲ್ಲಿ, ಬಜರಂಗ್ ಪುನಿಯಾ, ರವಿಕುಮಾರ್ ದಹಿಯಾ, ದೀಪಕ್ ಪುನಿಯಾ ಪಾಲ್ಗೊಳ್ಳುತ್ತಿದ್ದರೆ, ಮಹಿಳಾ ವಿಭಾಗದಲ್ಲಿ, ವಿನೇಶ ಪೋಗಟ್, ಅನ್ಷು ಮಲಿಕ್, ಸೋನಂ ಮಲಿಕ್, ಸೀಮಾ ಬಿಸ್ಲಾ ಕಾಣಿಸಲಿದ್ದಾರೆ.

ಮನರಂಜನೆ ಮತ್ತು ಕ್ರೀಡಾ ದತ್ತಾಂಶ ಕಂಪನಿಯಾದ ಗ್ರೇಸ್ ನೋಟ್ ಇತ್ತೀಚೆಗೆ ಲೆಕ್ಕ ಹಾಕಿರುವ ಪ್ರಕಾರ, ಭರತ ಈ ಸಾರಿ 17 ಪದಕಗಳನ್ನು ಗೆದ್ದು ಬರುವ ನಿರೀಕ್ಷೆಯಿದೆ. ಹಾಗಾದರೆ, ಈ ಸಾರಿಯ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡು ಪದಕಗಳನ್ನು ನಿರೀಕ್ಷಿಸಬಹುದಾದ ಭಾರತದ ಪ್ರಮುಖ ಕ್ರೀಡಾಪಟುಗಳನ್ನು ನೋಡುವುದಾದರೆ, ಶೂಟಿಂಗ್‌ನಲ್ಲಿ ಎಲವೆನಿಲ್ ವಲೆರಿವನ್, ಸೌರಭ್ ಚೌಧರಿ, ಮನು ಭಾಕರ್ ಮತ್ತು ಅಭಿಷೇಕ್ ವರ್ಮ. ಬಿಲ್ಗಾರಿಕೆಯಲ್ಲಿ; ಅತನು ದಾಸ್, ದೀಪಿಕಾ ಕುಮಾರಿ. ವೇಟ್ ಲಿಫ್ಟಿಂಗ್‌ನಲ್ಲಿ; ಮೀರಾಬಾಯಿ ಚಾನು. ಟ್ರ್ಯಾಕ್ ಆ್ಯಂಡ್ ಫೀಲ್ಡ್; ನೀರಜ್ ಚೋಪ್ರಾ. ಬಾಕ್ಸಿಂಗ್; ಅಮಿತ್ ಪಂಘಾಲ್, ಮೇರಿ ಕೋಮ್. ಕುಸ್ತಿ; ವಿನೇಶ್ ಪೋಗಟ್ ಮತ್ತು ಬಜ ರಂಗ್ ಪೂನಿಯಾ. ಬ್ಯಾಡ್ಮಿಂಟನ್; ಪಿ.ವಿ.ಸಿಂಧು. ಜೂಡೊ; ಸುಶೀಲಾ ದೇವಿ. ಟೆನಿಸ್; ಸಾನಿಯಾ ಮಿರ್ಜಾ, ಅಂಕಿತಾ ರೈನಾ. ಇನ್ನೊಂದು ವಿಶೇಷವೆಂದರೆ, ಈ ಸಾರಿಯ ಟೋಕಿಯೊ ಒಲಿಂಪಿಕ್ಸ್‌ನ ಜಿಮ್ನಾಸ್ಟಿಕ್ಸ್ ಪಂದ್ಯಗಳಲ್ಲಿ ಪಾಲ್ಗೊಳ್ಳಲು ಭಾರತದಿಂದ ಒಬ್ಬಳೇ ಒಬ್ಬ ಸ್ಪರ್ಧಿ ಭಾಗವಹಿಸುತ್ತಿದ್ದಾಳೆ. ಅವಳೇ ಪಶ್ಚಿಮ ಬಂಗಾಳದ ಪ್ರಣತಿ ನಾಯ್ಕ್. ಜತೆಗೆ, ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿರುವ ದಿವ್ಯಾಂಶು ಸಿಂಗ್ ಪನ್ವಾರ್ , ಕೇವಲ 18 ವರ್ಷದ ಕ್ರೀಡಾ ಪಟು! ಕೊನೆಯದಾಗಿ, ಟೋಕಿಯೊ ಒಲಿಂಪಿಕ್ 2020 ಪಂದ್ಯಾವಳಿಯಲ್ಲಿ ನಮ್ಮ ಕ್ರೀಡಾಪಟುಗಳು ಅತಿಹೆಚ್ಚು ಪದಕಗಳನ್ನು ಗೆದ್ದು ತರಲಿ ಎಂದು ಈ ಸಂದರ್ಭದಲ್ಲಿ ಶುಭ ಹಾರೈಸಿಬಿಡೋಣ.